"ಮಧುರ ಮಕ್ಕಳೇ - ಮಕ್ಕಳನ್ನು ತನ್ನ ಸಮಾನ ಅಶರೀರಿಯನ್ನಾಗಿ ಮಾಡಲು ತಂದೆಯು ಬಂದ್ದಿದ್ದಾರೆ, ಯಾವಾಗ ನೀವು ಅಶರೀರಿ ಆಗುತ್ತೀರೋ ಆಗ ತಂದೆಯ ಜೊತೆ ಹೋಗಲು ಸಾಧ್ಯ"

ಪ್ರಶ್ನೆ: ತಂದೆಯ ಯಾವ ಆಜ್ಞೆಯ ಮೇಲೆ ನಡೆದರೆ ನಿರಂತರ ಯೋಗಿಗಳಾಗಲು ಸಾಧ್ಯ?

ಉತ್ತರ: ತಂದೆಯ ಮೊದಲ ಆಜ್ಞೆಯಾಗಿದೆ - ಮಕ್ಕಳೇ, ಈ ದೇಹವನ್ನು ಮರೆಯಬೇಕು. ತಮ್ಮನ್ನು ತಾವು ಆತ್ಮನೆಂದು ನಿಶ್ಚಯ ಮಾಡಿಕೊಂಡಾಗ ತಂದೆಯ ನೆನಪು ನಿರಂತರವಾಗಿ ಇರುತ್ತದೆ. ಸದಾ ಈ ಒಂದು ಪಾಠವನ್ನು ಪಕ್ಕಾ ಮಾಡಿಕೊಳ್ಳಿ, ನಾನು ಆತ್ಮ ನಿರಾಕಾರ ಪ್ರಪಂಚದಲ್ಲಿ ಇರುವವನಾಗಿದ್ದೇನೆ. ಇದರಿಂದ ದೇಹದ ಅಹಂಕಾರ ಸಮಾಪ್ತಿಯಾಗಿ ಬಿಡುತ್ತದೆ. ಬುದ್ಧಿಯಲ್ಲಿ ಯಾವ ದೇಹಧಾರಿಯ ನೆನಪು ಬಾರದೇ ಇದ್ದಾಗ ನಿರಂತರ ಯೋಗಿಗಳಾಗಲು ಸಾಧ್ಯ.

ಗೀತೆ: ನಿಮ್ಮನ್ನು ಪಡೆದ ನಾವು ಜಗತ್ತನ್ನೇ ಪಡೆದೆವು.........

ಓಂ ಶಾಂತಿ. ಇದನ್ನು ಯಾರು ಹೇಳಿದರು? ಆತ್ಮವು ಹೇಳಿತು. ಓಂ ಎಂದರೆ ನಾನು ಆತ್ಮ ಶಾಂತ ಸ್ವರೂಪವಾಗಿದ್ದೇನೆ. ಇದು ತಿಳಿದುಕೊಳ್ಳುವ ವಿಷಯವಾಗಿದೆ. ಮೊದಲು ತಮ್ಮನ್ನು ತಾವು ಆತ್ಮ ಎಂದು ನಿಶ್ಚಯ ಮಾಡಿಕೊಳ್ಳಿ. ನಾವು ಆತ್ಮರಾಗಿದ್ದೇವೆ, ನಂತರ ಪಾತ್ರವನ್ನು ಅಭಿನಯಿಸಲು ಈ ಶರೀರ ಸಿಗುತ್ತದೆ. ನಾವು ಆತ್ಮಯಾರ ಸಂತಾನರಾಗಿದ್ದೇವೆ? ಶಾಂತಿಯ ಸಾಗರ, ಜ್ಞಾನದ ಸಾಗರ, ಪರಮಪಿತ ಪರಮಾತ್ಮನ ಸಂತಾನರಾಗಿದ್ದೇವೆ. ಅವರ ಸದಾ ಶಾಂತಿಯಲ್ಲಿ ಇರುತ್ತಾರೆ. ನಾವು ಆತ್ಮ ಒಂದು ಶರೀರ ಬಿಟ್ಟು ಮತ್ತೊಂದು ಶರೀರವನ್ನು ಪಡೆದು ಪಾತ್ರವನ್ನು ಅಭಿಯಿಸುತ್ತೇವೆ. ಶಿವ ತಂದೆಯ ವಿಚಿತ್ರನಾಗಿದ್ದಾರೆ, ಪರಮಾತ್ಮನಿಗೆ ಚಿತ್ರವಿಲ್ಲ (ಶರೀರವಿಲ್ಲ). ಆದರೆ ನೀವು ಮಕ್ಕಳಿಗೆ ಚಿತ್ರ (ಶರೀರ) ವಿದೆ. ತಂದೆ ಹೇಳುತ್ತಾರೆ ನಾನು ಸದಾ ವಿಚಿತ್ರ ಆಗಿದ್ದೇನೆ. ಬ್ರಹ್ಮ, ವಿಷ್ಣು, ಶಂಕರ, ಸೂಕ್ಷ್ಮ ಶರೀರಧಾರಿಗಳಾಗಿದ್ದಾರೆ. ನಾನು ಅಶರೀರಿ ಅರ್ಥಾತ್ ವಿಚಿತ್ರವಾಗಿದ್ದಾರೆ. ನೀವು ಆತ್ಮಗಳೂ ಸಹ ನನ್ನ ಜೊತೆ ನಿರ್ವಾಣ ಧಾಮದಲ್ಲಿ ಇರುವವರಾಗಿದ್ದೀರಿ. ವಿಚಿತ್ರನಾಗಿರುವ ತಂದೆ ಕುಳಿತು ತಿಳಿಸಿಕೊಡುತ್ತಾರೆ. ನೀವು ಆತ್ಮರು ಕೇಳುತ್ತಿದ್ದೀರಿ. ತಂದೆ ಹೇಳುತ್ತಾರೆ - ಇದು ದುಃಖಧಾಮವಾಗಿದೆ ಆದ್ದರಿಂದ ಈಗ ನನ್ನನ್ನು ನೆನಪು ಮಾಡಿ. ದುಃಖ ಪ್ರಪಂಚವಾಗಿದೆ. ನಾವು ಪತಿತರಾಗಿದ್ದೇವೆ. ನಾವು ಪತಿತರೆಂದು ಹೇಳುತ್ತಾರೆ, ಆದರೆ ಯಾರು ಪತಿತರನ್ನಾಗಿ ಮಾಡಿದರು? ತಂದೆಯಂತೂ ಮಾಡಿಲ್ಲ? ತಂದೆಯ ಮಹಿಮೆ ಮಾಡುತ್ತೀರಿ-ನೀವು ತಂದೆ-ತಾಯಿ, ನಿಮ್ಮಿಂದ ಅಪಾರ ಸುಖ ಪ್ರಾಪ್ತಿಯಾಗಿತ್ತು, ಅದನ್ನು ಎಲ್ಲಾ ಭಾರತವಾಸಿಗಳು ನೆನಪು ಮಾಡುತ್ತಾರೆ. ಬ್ರದರ್ಹುಡ್ ಅರ್ಥಾತ್ ನಾವೆಲ್ಲಾ ಸಹೋದರ-ಸಹೋದರರಾಗಿದ್ದೇವೆಂದು ಭಾರತೀಯರು ಹೇಳುತ್ತಾರೆ. ಪ್ರಜಾಪಿತ ಬ್ರಹ್ಮನ ಮೂಲಕ ರಚಿಸಿದಾಗ ನಾವೆಲ್ಲರೂ ಶಾರೀರಕವಾಗಿ ಸಹೋದರ-ಸಹೋದರಿಯಾಗುತ್ತೇವೆ. ಆತ್ಮ ಅವಿನಾಶಿಯಾಗಿದೆ ಆದರೆ ಎಂದಿಗೂ ಫಾದರ್ಹುಡ್ ಅರ್ಥಾತ್ ನಾವೆಲ್ಲಾ ತಂದೆಯರು ಎಂದು ಹೇಳುವುದಿಲ್ಲ. ಸನ್ಯಾಸಿಗಳು ಹೇಳುತ್ತಾರೆ - ಶಿವೋಹಂ ತತತ್ವಮ್ ಅಥವಾ ಈಶ್ವರ ಸರ್ವವ್ಯಾಪಿ ಆಗಿದ್ದಾನೆ, ಒಂದುವೇಳೆ ಈಶ್ವರ ಸರ್ವವ್ಯಾಪಿಯಾದರೆ ಎಲ್ಲರೂ ತಂದೆಯರಾಗಿ ಬಿಡುತ್ತಾರೆ. ಇದು ನಿಯಮಕ್ಕೆ (ಲಾ) ವಿರುದ್ಧವಾದುದಾಗಿದೆ. ಮಕ್ಕಳು ತಂದೆಯಿಂದ ಮುಕ್ತಿ ಹಾಗೂ ಜೀವನ್ಮುಕ್ತಿ ಆಸ್ತಿಯನ್ನು ತೆಗೆದುಕೊಳ್ಳುವ ಸಲುವಾಗಿ ಬೇಡುತ್ತಾರೆ. ಹೀಗೆ ಯಾವಾಗ ಇಲ್ಲಿಗೆ ತಂದೆಯ ಬಳಿಗೆ ಬರುತ್ತೀರಿ ಆಗ ನಾನು ಆತ್ಮನಾಗಿದ್ದೇನೆ, ತಮ್ಮನ್ನು ಆತ್ಮನೆಂದು ತಿಳಿದು ತಂದೆಯನ್ನು ನೆನಪು ಮಾಡಬೇಕು. ಅಂದಾಗ ನಾವು ಪರಮಾತ್ಮ ಆಗಲು ಸಾಧ್ಯವಿಲ್ಲ. ನಾವು ಆತ್ಮ ಆಗಿದ್ದೇವೆ, ಪರಮಪಿತ ಪರಮಾತ್ಮನಿಗೆ ನಾವೆಲ್ಲಾ ಮಕ್ಕಳು ಬ್ರಾಹ್ಮಣ ಬ್ರಾಹ್ಮಣಿಯರಾಗಿದ್ದೇವೆ. ನೀವು ಬ್ರಹ್ಮಾ ತಂದೆಗೆ ಮಕ್ಕಳು ಹಾಗೂ ಶಿವ ತಂದೆಗೆ ಮೊಮ್ಮಕ್ಕಳಾಗಿದ್ದೀರಿ. ಎಲ್ಲರೂ ಪರಮಪಿತ ಪರಮಾತ್ಮನನ್ನು ನೆನಪು ಮಾಡುತ್ತಾರೆ. ಅವರನ್ನು ಗಾಡ್ಫಾಧರ್ ಎಂದು ಹೇಳುತ್ತಾ, ಅವರನ್ನು ಸರ್ವವ್ಯಾಪಿ ಎಂದು ಹೇಳಿದರೆ ಆಸ್ತಿ ಎಲ್ಲಿಂದ ಸಿಗುತ್ತದೆ! ಭಕ್ತಿಮಾರ್ಗದಲ್ಲಿ ಎಲ್ಲರು ಭಗವಂತನನ್ನು ನೆನಪು ಮಾಡುತ್ತಾರೆ. ತಂದೆ ಒಬ್ಬರೇ ಆಗಿದ್ದಾರೆ. ನೀವೆಲ್ಲರೂ ಭಕ್ತರಾಗಿದ್ದೀರಿ. ವಧುಗಳು ಅನೇಕರಾಗಿದ್ದು ವರ ಅಥವಾ ಪ್ರಿಯತಮ ಒಬ್ಬ ತಂದೇಯೇ ಆಗಿದ್ದಾರೆ. ಉಳಿದವರೆಲ್ಲರೂ ಅವರ ಮಕ್ಕಳಾಗಿದ್ದಾರೆ. ಆದ್ದರಿಂದ ಅವರೊಬ್ಬರನ್ನೇ ನೆನಪು ಮಾಡಬೇಕು. ತಂದೆಯ ಆಜ್ಞೆಯಾಗಿದೆ ನೀವು ಮಕ್ಕಳು ಈ ದೇಹವನ್ನು ನೆನಪು ಮಾಡಬಾರದು. ಆತ್ಮವೇ ಹೇಳುತ್ತದೆ ನಾವು ದುಃಖಿ ಭ್ರಷ್ಟಾಚಾರಿ ಆಗಿದ್ದೇವೆ. ಇಲ್ಲಂತೂ ದೈವೀ ರಾಜ್ಯ ಇಲ್ಲ. 5000 ವರ್ಷಗಳ ಹಿಂದೆ ಭಾರತದಲ್ಲಿ ಲಕ್ಷ್ಮೀ-ನಾರಾಯಣರ ರಾಜ್ಯವಿತ್ತು. ಯಥಾ ರಾಜಾರಾಣಿ ತಥಾ ಪ್ರಜಾ ಸದಾ ಸುಖಿಯಾಗಿದ್ದರು. ಸ್ವರ್ಗದಲ್ಲಿ ಅಕಾಲಮೃತ್ಯು ಬರುತ್ತಿರಲಿಲ್ಲ. ಅಲ್ಲಿ ತುಂಬಾ ಕಡಿಮೆ ಜನ ಸಂಖ್ಯೆ ಇತ್ತು. ಭಾರತದಲ್ಲಿ ಮೊಟ್ಟ ಮೊದಲು ಸ್ವರ್ಗವಿತ್ತೆಂದು ಭಾರತವಾಸಿಗಳು ಮರೆತು ಹೋಗಿದ್ದಾರೆ. ಸ್ವರ್ಗ ಸ್ಥಾಪಕ ಪರಮಪಿತ ಪರಮಾತ್ಮ ಎಂದೂ ಹೇಳುತ್ತಾರೆ. ಸ್ವರ್ಗವೆಂದು ಮೂಲವತನಕ್ಕೆ ಹೇಳುವುದಿಲ್ಲ, ನಾವು ಆತ್ಮಗಳು ನಿರಾಕಾರಿ ಪ್ರಪಂಚದವರಾಗಿದ್ದೇವೆ, ಆದ್ದರಿಂದ ಯಾವ ದೇಹಧಾರಿಗಳ ನೆನಪು ಬರಬಾರದು. ದೇಹದ ಅಹಂಕಾರವನ್ನು ಬಿಟ್ಟು ತಮ್ಮನ್ನು ತಾವು ಆತ್ಮ ಎಂದು ತಿಳಿದು ತಂದೆಯನ್ನು ನೆನಪು ಮಾಡಬೇಕು. ಇಲ್ಲಿ ಕುಂಭ ಮೇಳ ನಡೆಯುತ್ತದೆ, ಅದನ್ನು ಕಲ್ಯಾಣಕಾರಿ

ಸಂಗಮಯುಗದ ಮೇಳವೆಂದು ಹೇಳುವುದಿಲ್ಲ. ಕಲಿಯುಗದ ಅಂತ್ಯ ಸತ್ಯಯುಗದ ಆದಿಯಲ್ಲಿ ಸಂಗಮಯುಗವು ಬರುತ್ತದೆ. ಕಲಿಯುಗವು ಪತಿತ ಪ್ರಪಂಚವಾಗಿದೆ, ಈ ಕಲಿಯುಗದಲ್ಲಿ ಒಬ್ಬರೂ ಸಹ ಪಾವನರಿಲ್ಲ. ಒಂದುವೇಳೆ ಅನೇಕ ಮಹಾತ್ಮರಿದ್ದರೂ ಸಹ ಅವರೂ ಪಾವನರಿಲ್ಲ. ಈ ಪ್ರಪಂಚವನ್ನು ಎಲ್ಲರು ಪತಿತವೆಂದು ಕರೆಯುತ್ತಾರೆ. ಆದುದರಿಂದ ಪಾವನರಾಗಲು ಕುಂಭ ಮೇಳಕ್ಕೆ ಹೋಗಿ ಗಂಗಾ ಸ್ನಾನ ಮಾಡುತ್ತಾರೆಂದರೆ ಅವಶ್ಯವಾಗಿ ಪತಿತರೆಂದು ಸ್ಪಷ್ಟವಾಗುತ್ತದೆ. ಈ ರೀತಿ ಸಾಧು ಸಂತರೂ ಸಹ ಪಾವನರಾಗಲು ಹೋಗುತ್ತಾರೆ. ಯಾವಾಗ ಭ್ರಷ್ಟಾಚಾರ ಹೆಚ್ಚಾಗುತ್ತದೋ ಆಗ ನಾನು ಬರುತ್ತೇನೆ. ಮನುಷ್ಯರು ಬಹಳ ದುಃಖದಲ್ಲಿದ್ದಾಗ ನಾನು ಬಂದು ಅಹಲ್ಯೆಯರನ್ನು, ವೇಶ್ಯೆಯರನ್ನು, ಸಾಧುಗಳನ್ನು, ಗುರು ಮೊದಲಾದವರನ್ನು ಉದ್ಧಾರ ಮಾಡಲು ಬರುತ್ತೇನೆ. ಏಕೆಂದರೆ ಅವರೂ ಸಹ ಪಾವನ ಆತ್ಮಗಳಲ್ಲ. ಪತಿತ ಪ್ರಪಂಚದಲ್ಲಿ ಯಾರೂ ಪಾವನರಿಲ್ಲ, ಪಾವನ ಪ್ರಪಂಚದಲ್ಲಿ ಯಾರೂ ಪತಿತರಿಲ್ಲ. ಪರಸ್ಪರ ಪತಿತರು ಪಾವನರಿಬ್ಬರು ಜೊತೆಯಲ್ಲಿಯೇ ಇರಲು ಸಾಯಿದೆಯಿಲ್ಲ. ಸಾಧುಗಳು ತಮ್ಮನ್ನು ಮಹಾನ್ ಆತ್ಮರೆಂದು ತಿಳಿದುಕೊಳ್ಳುವ ಬದಲು ಪರಮಾತ್ಮ ಎಂದು ತಿಳಿದುಕೊಳ್ಳುತ್ತಾರೆ. ಆ ಕಾರಣ ಶಿವೋಹಂ ಎಂದು ಹೇಳುತ್ತಾರೆ. ಪ್ರಾಚೀನ ಮಾಹಾತ್ಮರು ಆದಿಯಲ್ಲಿ ಪರಮಾತ್ಮನನ್ನು ಅಂತ್ಯವಿಲ್ಲದವರು ಎಂದು ತಿಳಿದಿದ್ದರು. ಅವರು ರಚೈತನಾಗಿದ್ದಾರೆ ಹಾಗೂ ಅವರ ರಚನೆ ಅಂತ್ಯವಿಲ್ಲದ್ದಾಗಿದೆ. ಆದರೆ ನಿರ್ವಾಣಧಾಮಕ್ಕೆ ಹೋಗುವುದು ಹೇಗೆ. ಭಾರತ ಜೀವನ್ಮುಕ್ತವಾಗಿತ್ತೆಂದು ಅವರು ತಿಳಿದುಕೊಂಡಿಲ್ಲ. ಆ ಸಮಯದಲ್ಲಿ ಯಾವ ಧರ್ಮವೂ ಇರಲಿಲ್ಲ. ಕೇವಲ ಸೂರ್ಯವಂಶಿ ಮತ್ತು ಚಂದ್ರವಂಶಿ ಇತ್ತು. ನಂತರ ಸೂರ್ಯವಂಶಿಯರಿಂದ ಚಂದ್ರವಂಶಿಯವರಾದರು. ಪುನರ್ಜನ್ಮದಲ್ಲಿ ಬಂದು 84 ಜನ್ಮಗಳನ್ನು ತಗೆದುಕೊಳ್ಳುತ್ತಾರೆ. ಆದರೆ 84 ಲಕ್ಷ ಜನ್ಮಗಳನ್ನು ಯಾರೂ ತೆಗೆದುಕೊಳ್ಳುವುದಿಲ್ಲ. ಈ ರೀತಿ 84 ಲಕ್ಷ ಜನ್ಮಗಳೆಂದು ಅತಿದೊಡ್ಡ ಸುಳ್ಳನ್ನು ಹೇಳಿದ್ದಾರೆ. ಬ್ರಹ್ಮನ ಹಗಲು ಮತ್ತು ರಾತ್ರಿಯಾಗಿದೆ, ಆದುದರಿಂದ 84 ಜನ್ಮಗಳು ಮಾತ್ರ ತೆಗೆದುಕೊಳ್ಳಬೇಕು. ತಂದೆ ಹೇಳುತ್ತಾರೆ ಈಗ ನಾವು ಯಾರನ್ನೂ ನೆನಪು ಮಾಡಬಾರದು, ನಾವು ಅತ್ಮಗಳು ಅತಿ ಪ್ರಿಯರಾದಂತ ಪರಂಪಿತ ಪರಮಾತ್ಮನ ಸಂತಾನರಾಗಿದ್ದೇವೆ. ಎಲ್ಲರು ಪರಮಾತ್ಮನ ರೂಪದಲ್ಲಿ ಇದ್ದಾರೆಂದು ಹೇಳಲಾಗುವುದಿಲ್ಲ, ಇದು ಅಸಂಭವವಾಗಿದೆ. ಇದು ನಂಬರ್ವನ್ ಸುಳ್ಳಾಗಿದೆ. ತಂದೆ ಒಬ್ಬರೇ ಆಗಿದ್ದಾರೆ, ಉಳಿದವರೆಲ್ಲರೂ ಮಕ್ಕಳು, ಆತ್ಮಗಳೆಲ್ಲರೂ ಸಹೋದರರಾಗಿದ್ದಾರೆ. ಯಾವಾಗ ನಾನು ಶರೀರದಲ್ಲಿ ಪ್ರವೇಶ ಮಾಡುತ್ತೇವೆ, ಆಗ ಬ್ರಹ್ಮಾ ತಂದೆಗೆ ವಿಶ್ವದ ಪ್ರಪ್ರಥಮ ಮಹಾಪಿತ ಎಂದು ಕರೆಯಲಾಗುವುದು. ಮೊಟ್ಟ ಮೊದಲನೆಯವರು ಬ್ರಾಹ್ಮಣರಾಗಿದ್ದಾರೆ. ಭಾರತದಲ್ಲಿನ ವಿರಾಟ ರೂಪ (ವಿಶ್ವ ರೂಪ) ಚಿತ್ರದಲ್ಲಿ ಬ್ರಾಹ್ಮಣರು ಶಿಖೆಯಾಗಿದ್ದು, ಭಗವಂತನಿಗೆ ಶ್ರೇಷ್ಠರಲ್ಲಿ ಶ್ರೇಷ್ಠ ಸಂತಾನರಾಗಿದ್ದಾರೆ. ಈಗ ನೀವು ಈಶ್ವರನ ಸಂತಾನರಾಗಿದ್ದೀರಿ. ನಾವು ಬ್ರಹ್ಮ ತಂದೆಯ ಮಕ್ಕಳು ಹಾಗೂ ಶಿವ ತಂದೆಗೆ ಮೊಮ್ಮಕ್ಕಳು ಆಗಿದ್ದೇವೆ. ಎಲ್ಲಾ ಆತ್ಮಗಳು ಶಿವಬಾಬಾರವರ ಮಕ್ಕಳಾಗಿದ್ದೇವೆ, ಅವರಿಂದ ಅಸ್ತಿಯನ್ನು ಪಡೆದುಕೊಳ್ಳುತ್ತೇವೆ. ಶಿವಬಾಬಾರವರು ನಮ್ಮ ಜೋಳಿಗೆ ತುಂಬುವವರು ಆಗಿದ್ದಾರೆ, ಹಾಗೂ ಮಾಯೆ ಅದನ್ನು ಖಾಲಿ ಮಾಡುತ್ತದೆ. ಪತಿತ ಪಾವನ ಸೀತಾ ರಾಮ ಎಂದು ಹಾಡುತ್ತಾರೆ. ಆದರೆ ಮನುಷ್ಯರ ಬುದ್ಧಿಯಲ್ಲಿ ತ್ರೇತಾಯುಗದ ರಾಮ ಸೀತೆ ಮಾತ್ರ ಇದ್ದಾರೆ. ಸತ್ಯಯುಗ ಮತ್ತು ತ್ರೇತಾಯುಗ ಸುಖಧಾಮವಾಗಿದೆ ಎಂದು ನೀವು ಮಕ್ಕಳಿಗೆ ಮಾತ್ರ ತಿಳಿದಿದೆ. ಅಲ್ಲಿ ದುಃಖದ ಹೆಸರು, ಗುರುತೂ ಸಹ ಇರುವುದಿಲ್ಲ. ಪತಿತ ಪಾವನ ಹಾಗೂ ಎಲ್ಲರ ತಂದೆ ಒಬ್ಬರೇ ಆಗಿದ್ದಾರೆ. ಹನುಮಂತನ ಮಂದಿರದಲ್ಲಿ ಹೋಗಿ ಹಾಡುತ್ತಾರೆ ನೀನೆ ತಂದೆ ನೀನೆ ತಾಯಿ.......... ಎಂದು, ಆದರೆ ಇದು ಹೇಗೆ ಸಾಧ್ಯ. ಎಲ್ಲರ ಸದ್ಗತಿದಾತ ಪತಿತ ಪಾವನ ಒಬ್ಬರೇ ಆಗಿದ್ದಾರೆ, ಅವರೇ ಜ್ಞಾನದ ಸಾಗರ ಆಗಿದ್ದಾರೆ. ಸಾಗರದಿಂದ ನದಿಯ ಜನ್ಮವಾಗುತ್ತದೆ. ಆದರೆ ಅದು ನೀರಿನ ನದಿಯಾಗಿರುವುದರಿಂದ ಯಾರೂ ಸಹ ಇದರಿಂದ ಪತಿತ ಪಾವನರಾಗಲು ಸಾಧ್ಯವಿಲ್ಲ, ನೀರಿನಲ್ಲಿ ಸ್ನಾನ ಮಾಡುವುದರಿಂದ ಪಾವನರಾಗುತ್ತೇವೆಂದು ಹೇಳಲು ಆಗುವುದಿಲ್ಲ. ಒಂದು ಮುಕ್ತಿ, ಇನ್ನೊಂದು ಜೀವನ್ಮುಕ್ತಿ ಆಗಿದೆ. ಸದ್ಗತಿದಾತ ಅಥವಾ ಜೀವನ್ಮುಕ್ತಿದಾತ ಒಬ್ಬರೇ ಆಗಿದ್ದಾರೆ. ಇದು ಪತಿತ ಪ್ರಪಂಚವಾಗಿದೆ. 5000 ವರ್ಷಗಳ ಹಿಂದೆ ಭಾರತದಲ್ಲಿ ಲಕ್ಷ್ಮೀ-ನಾರಾಯಣರ ರಾಜ್ಯವಿತ್ತು. ಆಗ ಮತ್ತ್ಯಾವ ಖಂಡಗಳೂ ಇರಲಿಲ್ಲ. ಈಗ ನೀವು 5000 ವರ್ಷಗಳ ಮಾತನ್ನು ತಿಳಿದುಕೊಂಡಿದ್ದೀರಿ. ಭಾರತದ ನಂತರ ಅನೇಕ ಖಂಡಗಳು ಬರುತ್ತವೆ. ಈಗ ಎಷ್ಟೊಂದು ವೃದ್ಧಿಯಾಗಿ ಬಿಟ್ಟಿದೆ. ಮಕ್ಕಳೇ, ಇದನ್ನು ಸದಾ ನೆನಪಿಟ್ಟುಕೊಳ್ಳಿ ಇದನ್ನು ದಾದಾ ಅಥವಾ ಬ್ರಹ್ಮಾ ಹೇಳುತ್ತಾರೆಂದು ತಿಳಿದುಕೊಳ್ಳಬಾರದು. ಶಿವಬಾಬಾ ವಿಶ್ವದ ರಚೈತ ಆಗಿದ್ದಾರೆ, ಅವರೇ ಕುಳಿತುಕೊಂಡು ಇದೆಲ್ಲಾ ರಹಸ್ಯವನ್ನು ತಿಳಿಸಿಕೊಡುತ್ತಾರೆ. ಋಷಿ ಮುನಿಗಳು ಪರಮಾತ್ಮ ಅಂತ್ಯವಿಲ್ಲದವರು ಎಂದು ಹೇಳುತ್ತಾರೆ. ನಾವು ಬ್ರಾಹ್ಮಣರು ಆಸ್ತಿಕರಾಗಿದ್ದೇವೆ. ಏಕೆಂದರೆ ನಮಗೆ ರಚೈತ ಹಾಗೂ ರಚನೆಯ ಜ್ಞಾನವನ್ನು ತಂದೆಯು ತಿಳಿಸುತ್ತಿದ್ದಾರೆ. ತ್ರಿಕಾಲದರ್ಶಿಯನ್ನಾಗಿ ಮಾಡುತ್ತಿದ್ದಾರೆ. ಋಷಿ ಮುನಿಗಳು ಯಾರೂ ತ್ರಿಕಾಲದರ್ಶಿಗಳಾಗಲು ಸಾಧ್ಯವಿಲ್ಲ. ತಂದೆಯು ಹೇಳುತ್ತಾರೆ ದೇವೀ-ದೇವತೆಗಳೂ ಸಹ ತ್ರಿಕಾಲದರ್ಶಿಗಳಲ್ಲ. ಕೇವಲ ಬ್ರಾಹ್ಮಣರು ಮಾತ್ರ ತ್ರಿಕಾಲದರ್ಶಿಗಳಾಗಿದ್ದಾರೆ. ಬ್ರಾಹ್ಮಣರಿಂದ ಹೊಸ ರಚನೆ ಪ್ರಾರಂಭವಾಗುತ್ತದೆ. ನೀವು ಎಲ್ಲರಿಗಿಂತ ಉತ್ತಮರಾಗಿದ್ದೀರಿ. ನೀವು ತಂದೆಯ ಶ್ರೀಮತದಂತೆ ಭಾರತವನ್ನು ಶ್ರೇಷ್ಠಾತಿ-ಶ್ರೇಷ್ಠ ಮಾಡುತ್ತಿರುವಿರಿ, ಶ್ರೀಮತವನ್ನು ತಂದೆಯ ವಿನಃ ಕೃಷ್ಣನು ನೀಡಲು ಸಾಧ್ಯವಿಲ್ಲ. ಕೃಷ್ಣನು ಪತಿತ ಪಾವನನಲ್ಲ, ಪತಿತ ಪಾವನ ಒಬ್ಬರೇ ತಂದೆಯಾಗಿದ್ದು, ಅವರೇ ಎಲ್ಲರ ತಂದೆಯಾಗಿದ್ದಾರೆ. ನಾವು ಆತ್ಮಗಳು ಈ ಇಂದ್ರಿಯಗಳ ಮುಖಾಂತರ ಕೇಳುತ್ತೇವೆಂದು ಸದಾ ನೆನಪಿಟ್ಟುಕೊಳ್ಳಬೇಕು. ಆತ್ಮಾಭಿಮಾನಿ ಭವ. ತಂದೆಯು ಆತ್ಮಗಳಿಗೆ ಜ್ಞಾನವನ್ನು ಕೊಡುತ್ತಿದ್ದಾರೆ. ಜ್ಞಾನದ ಅಂಜನವನ್ನು ಸದ್ಗುರು ಕೊಟ್ಟರು...... ಎಂದು ಹಾಡುತ್ತಾರೆ. ತಂದೆ ಪತಿತ ಪಾವನ ಸದ್ಗತಿದಾತರಾಗಿದ್ದಾರೆ. ತಂದೆಯು ಮಕ್ಕಳಿಗೆ ಮೊದಲು ದಿವ್ಯ ಜನ್ಮ ನೀಡಿ, ಶಿಕ್ಷಕರಾಗಿ ಓದಿಸಿ, ಸದ್ಗುರುವಾಗಿ ಸದ್ಗತಿ ಕೊಡುತ್ತಾರೆ. ಸರ್ವರಿಗೂ ಸದ್ಗತಿಯನ್ನು ಕೊಡುವವರು ಒಬ್ಬರೇ ತಂದೆಯಾಗಿದ್ದಾರೆ. ನೀವು

ಮಕ್ಕಳು ಹೊಸ ಪ್ರಪಂಚಕ್ಕೆ ಹೋಗುವುದಕ್ಕಾಗಿ ಅಥವಾ ಮನುಷ್ಯರಿಂದ ದೇವತೆಗಳಾಗುವ ವಿದ್ಯೆಯನ್ನು ಓದುತ್ತಿದ್ದೀರಿ. ಈಗ ಪತಿತ ಮನುಷ್ಯ ಸೃಷ್ಟಿ ಸಮಾಪ್ತಿಯಾಗಿ ದೈವೀ ಪ್ರಪಂಚ ಬರಲಿದೆ. ನಾವು ದೇವತೆಗಳನ್ನು ಪೂಜೆ ಮಾಡುತ್ತೇವೆ. ಆದರೆ ಇವರು ದೇವೀ-ದೇವತಾ ಧರ್ಮದವರೆಂದು ನಮಗೆ ಗೊತ್ತಿಲ್ಲ. ಯಾರನ್ನು ನಾವು ಪೂಜೆ ಮಾಡುತ್ತೇವೆಯೋ, ಅವರ ಧರ್ಮವೇ ನಮ್ಮ ಧರ್ಮವಾಗಿದೆ ಎಂದು ಹೇಳುತ್ತೇವೆ. ಭಾರತದಲ್ಲಿ ಸ್ವರ್ಗವಿದ್ದಾಗ ಆದಿ ಸನಾತನ ದೇವೀ-ದೇವತಾ ಧರ್ಮವಿತ್ತು. ಮನುಷ್ಯ 84 ಲಕ್ಷ ಜನ್ಮಗಳನ್ನು ತೆಗೆದುಕೊಳ್ಳುತ್ತಾನೆಂದು ಹೇಳುತ್ತಾರೆ. ಇಷ್ಟೊಂದು ಜನ್ಮವನ್ನು ತೆಗೆದುಕೊಳ್ಳಬೇಕಾದರೆ ಕಲ್ಪವೂ ಅಷ್ಟೆ ದೊಡ್ಡದಾಗಿರಬೇಕು. ಇದೂ ಸಹ ನಾಟಕದನುಸಾರ ಮಾಡಲ್ಪಟ್ಟಿದೆ. ಏನೆಲ್ಲಾ ಇದುವರೆಗೂ ನಡೆದಿದೆಯೋ ಅದೆಲ್ಲಾ ನಾಟಕವಾಗಿದೆ. ಮೂಲವತನ, ಸೂಕ್ಷ್ಮವತನವನ್ನು ನೀವು ಮಕ್ಕಳು ಮಾತ್ರ ತಿಳಿದುಕೊಂಡ್ಡಿದ್ದೀರಿ. ನೀವು ಸ್ವದರ್ಶನ ಚಕ್ರಧಾರಿಗಳಾಗಿದ್ದೀರಿ. ವಿಷ್ಣುವನ್ನು ಸ್ವದರ್ಶನ ಚಕ್ರಧಾರಿ ಎಂದು ಹೇಳುತ್ತಾರೆ. ತಂದೆ ತಿಳಿಸುತ್ತಾರೆ - ವಿಷ್ಣುವಿನ ಎರಡು ರೂಪವಾದ ಲಕ್ಷ್ಮೀ-ನಾರಾಯಣರು ಸ್ವದರ್ಶನ ಚಕ್ರಧಾರಿಗಳಲ್ಲ. ನೀವು ಬ್ರಾಹ್ಮಣರು ಮಾತ್ರ ಸ್ವದರ್ಶನ ಚಕ್ರಧಾರಿಗಳಾಗಿದ್ದೀರಿ. ನಂತರ ಹೇಳುತ್ತಾರೆ ಕೃಷ್ಣನಿಗೆ ಸ್ವರ್ದರ್ಶನ ಚಕ್ರವಿತ್ತು ಹಾಗೂ ಅದನ್ನು ಯುದ್ಧ ಭೂಮಿಯಲ್ಲಿ ಉಪಯೋಗಿಸಿದನು, ಇದರಿಂದ ಕೌರವರು ಸತ್ತರು, ಆದರೆ ದೇವತೆಗಳು ಸ್ವಲ್ಪವೂ ಹಿಂಸೆ ಮಾಡುವುದಿಲ್ಲ, ಅವರು ಡಬಲ್ ಅಹಿಂಸಕರಾಗಿದ್ದಾರೆ. ಅವರಲ್ಲಿ ವಿಕಾರವೂ ಇಲ್ಲ, ಯುದ್ಧವೂ ಇಲ್ಲ. ಪರಸ್ಪರ ವಿಷವನ್ನು ಕುಡಿಸುವುದು, ಕಾಮ ವಿಕಾರಕ್ಕೆ ವಶವಾಗುವುದು ಇದು ಎಲ್ಲದಕ್ಕಿಂತ ದೊಡ್ಡ ಹಿಂಸೆಯಾಗಿದೆ. ತಂದೆಯು ತಿಳಿಸಿ ಕೊಡುತ್ತಾರೆ, ಇದರಿಂದ ಆದಿ-ಮಧ್ಯ-ಅಂತ್ಯದಿಂದ ದುಃಖವನ್ನು ಅನುಭವಿಸುತ್ತಲೇ ಬಂದಿದ್ದೀರಿ. ಸತ್ಯಯುಗದಲ್ಲಿ ಕಾಮ ವಿಕಾರಕ್ಕೆ ವಶವಾಗುವುದಿಲ್ಲ. ಅದು ನಿರ್ವಿಕಾರಿ ರಾಜ್ಯವಾಗಿತ್ತು. ಸರ್ವಗುಣ ಸಂಪನ್ನ, ಮರ್ಯಾದಾ ಪುರುಷೋತ್ತಮರಾಗಿದ್ದರು. ಹಿಂಸೆ ಇರಲ್ಲಿಲ. ಈಗ ರಾವಣ ರಾಜ್ಯವಿದೆ. 5 ವಿಕಾರಗಳು ಸರ್ವವ್ಯಾಪಿಯಾಗಿದೆ. ಆದರೂ ತಂದೆಯನ್ನು ಸರ್ವವ್ಯಾಪಿ ಎಂದು ಹೇಳುತ್ತಾರೆ. ಈಗ ನೂರು ವರ್ಷಗಳಿಂದೀಚೆಗೆ ಅನೇಕ ವಿಮಾನಗಳನ್ನು ಕಂಡು ಹಿಡಿದಿದ್ದಾರೆ - ಇದೆಲ್ಲಾ ಏತಕ್ಕಾಗಿ? ಇದು ಇಲ್ಲಿ ಅಭ್ಯಾಸ ನಡೆಯುತ್ತಿದೆ. ಇಲ್ಲಿನ ಎಲ್ಲಾ ವಸ್ತುಗಳು ಭವಿಷ್ಯದಲ್ಲಿ ಉಪಯೋಗವಾಗುತ್ತದೆ. ಇದರ ಮುಖಾಂತರ ಎಲ್ಲವೂ ವಿನಾಶವಾಗಿ ಬಿಡುತ್ತದೆ. ನಂತರ ಸ್ವರ್ಗದಲ್ಲಿ ಸುಖಕ್ಕಾಗಿ ಉಪಯೋಗವಾಗುತ್ತದೆ. ಇಲ್ಲಿ ಸುಖವಿರುತ್ತದೆಯೆಂದರೆ, ದುಃಖವೂ ಇರುತ್ತದೆ. ಇದನ್ನು ಮಾಯೆಯ ಆಡಂಬರವೆನ್ನುತ್ತಾರೆ. ವಿನಾಶವಾದರೆ ಒಳ್ಳೆಯದೆ ಅಲ್ಲವೇ. ಓ ಪತಿತ ಪಾವನ ಬಾ ಎಂದು ಕರೆಯುತ್ತಾರೆ, ಆದರೆ ತಂದೆ ಕೇಳುತ್ತಾರೆ-ನಾನು ಬಂದು ಏನು ಮಾಡಲಿ? ಮಕ್ಕಳು ಹೇಳುತ್ತಾರೆ - ತಂದೆಯು ಮತ್ತೆ ಸುಖವನ್ನು ಪಡೆಯಲು ಸ್ವರ್ಗದ ಸ್ಥಾಪನೆ ಮಾಡಿ. ಮಕ್ಕಳೇ ಇದು ನಾಟಕವಾಗಿದೆ. ತಂದೆ ಸುಖಧಾಮವನ್ನು ರಚನೆ ಮಾಡುತ್ತಾರೆ, ರಾವಣ ಮತ್ತೆ ದುಃಖಧಾಮವನ್ನಾಗಿ ಮಾಡುತ್ತಾನೆ. ಶಾಂತಿಧಾಮದಿಂದ ಮೊದಲು ಆತ್ಮಗಳು ಸುಖಧಾಮಕ್ಕೆ ಬರುತ್ತವೆ. ಈ ಸಮಯದಲ್ಲಿ ಎಲ್ಲರೂ ಪತಿತರಾಗಿದ್ದಾರೆ. ಆದ್ದರಿಂದ ಪರಮಾತ್ಮನನ್ನು ಕರೆಯುತ್ತಾರೆ. ತಂದೆಯೂ ಸಹ ಡ್ರಾಮಾದ ಬಂಧನದಲ್ಲಿ ಬಂಧಿಸಿದ್ದಾರೆ. ತಂದೆಯು ತಿಳಿಸುತ್ತಾರೆ-ಯಾವಾಗ ಎಲ್ಲರೂ ದುಃಖಿಗಳಾಗುತ್ತಾರೋ ಅಗ ನಾನು ಬರುತ್ತೇನೆ. ಇದು ಕಲಿಯುಗದ ಅಂತ್ಯ, ಹಾಗೂ ಸತ್ಯಯುಗದ ಆದಿಯ ಸಂಗಮಯುಗವಾಗಿದೆ. ಸಂಗಮಯುಗದಲ್ಲಿ ಕುಂಭಮೇಳ ಮಾಡುತ್ತಾರೆ. ಅಲ್ಲಂತೂ ನೀರಿನ ಸಾಗರ ಮತ್ತು ನದಿಯ ಮೇಳ ಆಗುತ್ತಿದೆ. ಇಲ್ಲಿ ಪರಮಪಿತ ಪರಮಾತ್ಮ ಹಾಗೂ ಆತ್ಮಗಳ ಮೇಳವಾಗಿದೆ ಎಂದು ಹೇಳುತ್ತೇವೆ. ತಂದೆಗೆ ತನ್ನದೇ ಆದ ಶರೀರವಿಲ್ಲ, ನಿಮಗೆ ಜ್ಞಾನ ಕೊಡಲು ಶರೀರವು ಅವಶ್ಯವಾಗಿ ಬೇಕು. ಇಲ್ಲವೆಂದರೆ ನಾನು ಹೇಗೆ ಮಾತನಾಡಲಿ, ಆದ್ದರಿಂದ ಈ ಶರೀರವನ್ನು (ಬ್ರಹ್ಮಾ) ದತ್ತು ತೆಗೆದುಕೊಂಡಿದ್ದೇನೆ. ಈಗ ನೀವು ಈಶ್ವರನ ಸನ್ಮುಖದಲ್ಲಿ ಕುಳಿತಿದ್ದೀರಿ. ತಂದೆಯ ಮುಖಾಂತರ ನಾವು ಈಶ್ವರನ ಮಕ್ಕಳಾಗಿದ್ದೇವೆಂದು ತಿಳಿದುಕೊಂಡಿದ್ದೇವೆ. ಈಗ ಪರಮಪಿತ ಪರಮಾತ್ಮ ತಿಳಿಸುತ್ತಾರೆ-ನಾನು ಹೇಗೆ ಬರಲಿ? ಯಾರಲ್ಲಿ ಪ್ರವೇಶ-ಮಾಡಲಿ? ಅವಶ್ಯವಾಗಿ ನಾನು ಪತಿತ ಪ್ರಪಂಚ ಪತಿತ ಶರೀರದಲ್ಲಿ ಬರಬೇಕಾಗುತ್ತದೆ. ತಂದೆ ಹೇಳುತ್ತಾರೆ - ಮೊದಲು ನೀವು ಸುಂದರವಾಗಿ (ಪವಿತ್ರವಾಗಿ) ಇದ್ದವರು ಈಗ ಕಪ್ಪಾಗಿ (ಅಪವಿತ್ರ) ಬಿಟ್ಟಿದ್ದೀರಿ. ಪ್ರತಿಯೊಬ್ಬರ ಹೆಸರಾಗಿದೆ ಶ್ಯಾಮ ಸುಂದರ. ಈಗ ಶ್ಯಾಮರಾಗಿದ್ದೀರಿ. ಶ್ಯಾಮ ಸುಂದರಎಂದು ಕೃಷ್ಣನಿಗೆ ಹೇಳಲಾಗುತ್ತದೆ. ಭಾರತ ಖಂಡಿತವಾಗಿ ಮೊದಲು ಸುಂದರವಾಗಿತ್ತು. ಚಿನ್ನದ ಯುಗವಾಗಿತ್ತು. ಉತ್ತಮವಾದ ಪರಿಸರವಿತ್ತು, ಅಲ್ಲಿ ಅಂಗವಿಕಲರು ಇರಲಿಲ್ಲ, ಕೃಷ್ಣನೇ ನಂಬರ್ವನ್ ಶ್ಯಾಮ ಸುಂದರನು. ಶಿವ ಬಾಬಾ ಇದೇ(ಬ್ರಹ್ಮ) ಶ್ಯಾಮ ಸುಂದರನ ಶರೀರದಲ್ಲಿ ಬಂದು ನೀವು ಮಕ್ಕಳನ್ನು ಶ್ಯಾಮರಿಂದ ಸುಂದರರನ್ನಾಗಿ ಮಾಡಲು ಬಂದಿದ್ದಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ನಮ್ಮ ಬ್ರಾಹ್ಮಣ ಜನ್ಮ (ಜುಟ್ಟು) ಎಲ್ಲದಕ್ಕಿಂತ ಉತ್ತಮವಾಗಿದೆ. ಈ ನಶೆಯಲ್ಲಿದ್ದು ಶ್ರೀಮತದಂತೆ ನಡೆದು ಭಾರತವನ್ನು ಶ್ರೇಷ್ಠ ಮಾಡುವಂತ ಸೇವೆ ಮಾಡಬೇಕು. ಆಸ್ತಿಕರಾಗಬೇಕು ಮತ್ತು ಅನ್ಯರನ್ನು ಆಸ್ತಿಕರನ್ನಾಗಿ ಮಾಡಬೇಕು.

2. ದೇಹದ ಅಹಂಕಾರವನ್ನು ಬಿಟ್ಟು ಆತ್ಮಾಭಿಮಾನಿಗಳಾಗಬೇಕು. ವಿಚಿತ್ರ (ಅಶರೀರಿ) ಆಗಲು ಸಂಪೂರ್ಣ ಪುರುಷಾರ್ಥ

ಮಾಡಬೇಕು.

ವರದಾನ: ಶ್ರೇಷ್ಠ ಪುರುಷಾರ್ಥದ ಮೂಲಕ ಶಕ್ತಿ ಹಾಗೂ ಗುಣದ ಅನುಭವ ಮಾಡುವಂತಹ ಅನುಭವಿ ಮೂರ್ತಿ ಭವ.

ಅತ್ಯಂತ ಶ್ರೇಷ್ಠ ಅಧಿಕಾರವೆಂದು ಅನುಭವದ್ದಾಗಿದೆ. ಹೇಗೆ ಯೋಚಿಸುತ್ತೀರಿ ಮತ್ತು ಹೇಳುತ್ತೀರಿ- ಆತ್ಮವು ಶಾಂತ ಸ್ವರೂಪ, ಸುಖ ಸ್ವರೂಪವಾಗಿದೆ, ಹೀಗೆ ಒಂದೊಂದು ಗುಣ ಅಥವಾ ಶಕ್ತಿಯ ಅನುಭೂತಿ ಮಾಡಿರಿ ಹಾಗೂ ಆ ಅನುಭವಗಳಲ್ಲಿ ಮುಳುಗಿ ಬಿಡಿ/ಮಗ್ನರಾಗಿರಿ. ಯಾವಾಗ ಶಾಂತ ಸ್ವರೂಪನೆಂದು ಹೇಳುತ್ತೀರಿ ಆಗ ಸ್ವರೂಪದಲ್ಲಿ ಸ್ವಯಂಗೆ, ಅನ್ಯರಿಗೆ ಶಾಂತಿಯ ಅನುಭೂತಿಯಾಗಲಿ. ಶಕ್ತಿಗಳ ವರ್ಣನೆ ಮಾಡುತ್ತೀರಿ ಆದರೆ ಶಕ್ತಿ ಅಥವಾ ಗುಣವು ಸಮಯದಲ್ಲಿ ಅನುಭವದಲ್ಲಿ ಬರಲಿ. ಅನುಭವಿ ಮೂರ್ತಿಯಾಗುವುದೇ ಶ್ರೇಷ್ಠ ಪುರುಷಾರ್ಥದ ಸಂಕೇತವಾಗಿದೆ. ಅಂದಾಗ ಅನುಭವಗಳನ್ನು ಹೆಚ್ಚಿಸಿಕೊಳ್ಳಿರಿ.

ಸ್ಲೋಗನ್: ಸಂಪನ್ನತೆಯ ಅನುಭೂತಿಯ ಮೂಲಕ ಸಂತುಷ್ಟ ಆತ್ಮನಾಗುವಿರೆಂದರೆ ಅಪ್ರಾಪ್ತಿಯ ಹೆಸರು-ಚಿಹ್ನೆಯೂ ಇರುವುದಿಲ್ಲ.